# ನಕ್ಷತ್ರ ಎಟುಕಿಸಿಕೊಂಡ ಚಿತ್ರ

ಒಲ್ಲದ ಬಾಲ್ಯ ವಿವಾಹದಿಂದ ಕಳಚಿಕೊಳ್ಳುವ ಬಾಲಕಿಯ ಹೋರಾಟದ ಕಥಾನಕದ ಸಿನಿಮಾದಲ್ಲಿ ಹಲವು ಸೂಕ್ಷ್ಮಗಳಿವೆ. ಒಪ್ಪಿತ ಮೆಲೋಡ್ರಾಮಾ ಹೊಂದಿದ್ದೂ, ನಿರ್ದೇಶಕಿಯು ತನ್ನದೇ ಬೇರುಗಳನ್ನು ತಡಕಿರುವ ಆತ್ಮಶೋಧದ ಕನ್ನಡಿಯಾಗಿಯೂ ಇದನ್ನು ನೋಡಬೇಕು

ಬಾಲಕಿಯರ, ಮಹಿಳೆಯರ ಮೇಲಿನ ದೌರ್ಜನ್ಯ ಪ್ರತಿಬಿಂಬಿಸುವ ಸಿನಿಮಾಗಳನ್ನು ತಯಾರಿಸುವುದು ಅತಿ ಸೂಕ್ಷ್ಮ ಕ್ರಿಯಾಶೀಲತೆ. ಇಂಥ ಚಿತ್ರ ಒಂದೋ ವಾಚ್ಯವಾಗಿ, ಉದ್ದೇಶವೇ ಮುಕ್ಕಾಗುವ ಅಪಾಯವಿರುತ್ತದೆ. ಇಲ್ಲವೇ ಕೊನೆಯಲ್ಲಿ ಸಂದೇಶ ಅಡಕಮಾಡಿ, ಅದಕ್ಕೂ ಮೊದಲು ತೋರಬಾರದ್ದನ್ನೆಲ್ಲಾ ತೋರಿಸುವ ಕೆಟ್ಟ ಮಾದರಿಯ ದುರ್ಬಲ ಅನುಕರಣೆ ಆಗುವ ಸಾಧ್ಯತೆ ಇರುತ್ತದೆ. ಈ ಕಾರಣಕ್ಕೇ ನಿರ್ದೇಶಕಿಯರು ಕೂಡ ಸ್ತ್ರೀ ಕೇಂದ್ರಿತ ಸಾಮಾಜಿಕ ಸಮಸ್ಯೆಗಳ ಚಿತ್ರ ಮಾಡಲು ಹಿಂಜರಿಯುವುದುಂಟು. ಭಾರತದಲ್ಲಂತೂ ಇದು ಕಷ್ಟಸಾಧ್ಯ ಎಂದು ಅನೇಕರು ಮುಕ್ತವಾಗಿ ಹೇಳುತ್ತಾರೆ. ಈ ಹಿನ್ನೆಲೆಯಿಂದ ನೋಡಿದರೆ, ಯೆಮೆನ್ ಮೂಲದ ನಿರ್ದೇಶಕಿ ಖದಿಜಾ–ಅಲ್–ಸಲಾಮಿ ತನ್ನ ನೆಲದ್ದೇ ಗಂಭೀರ ಸಮಸ್ಯೆಯನ್ನು ಸಿನಿಮಾದಲ್ಲಿ ತೋರಿ ಗೆದ್ದಿರುವುದು ದೊಡ್ಡ ಸಾಹಸವೇ ಹೌದು. ಯೆಮೆನ್‌ನಲ್ಲಿ ಸಂಚಲನ ಮೂಡಿಸಿದ್ದ ಹತ್ತು ವರ್ಷದ ಬಾಲಕಿ ವಿವಾಹ ವಿಚ್ಛೇದನ ಪಡೆಯುವ ಪ್ರಸಂಗವನ್ನು ಅವರು ಚಿತ್ರವಾಗಿಸಿದ್ದಾರೆ. ಶೀರ್ಷಿಕೆ: 'ಐ ಆಮ್ ನೊಜೂಮ್, ಏಜ್ 10 ಅಂಡ್ ಡಿವೋರ್ಸ್ಡ್'.

ಯೆಮೆನ್‌ನ ನೊಜೂದ್ ಅಲಿ 2008ರಲ್ಲಿ ವಿವಾಹ ವಿಚ್ಛೇದನ ಪಡೆದು ಸುದ್ದಿಯಾದದ್ದು ನಿಜ ಘಟನೆ. ವಿಶ್ವದಲ್ಲಿಯೇ ಅಷ್ಟು ಚಿಕ್ಕಪ್ರಾಯಕ್ಕೆ ವಿವಾಹ ವಿಚ್ಛೇದನ ಪಡೆದ ಮೊದಲ ಬಾಲಕಿ ಎಂದೇ ಆ ಪ್ರಸಂಗವನ್ನು ಜಗತ್ತು ಬೆರಗಿನಿಂದ ನೋಡಿತ್ತು. ಮಾಧ್ಯಮಗಳ ಸುದ್ದಿಯಷ್ಟೇ ಆಗಿ ಉಳಿಯದ ಆ ಘಟನೆಯನ್ನು ಒಳಗೊಂಡ 'ಐ ಆಮ್ ನೊಜೂದ್, ಏಜ್ 10 ಅಂಡ್ ಡಿವೋರ್ಸ್ಡ್' ಹೆಸರಿನ ಕೃತಿ ಕೂಡ ಪ್ರಕಟವಾಯಿತು. ಫ್ರಾನ್ಸ್ ಲೇಖಕಿ ಡೆಲ್ಫಿನ್ ಮಿನೊ ಬರೆದ ಈ ಪುಸ್ತಕದ ತಿರುಳನ್ನು ಖದಿಜಾ–ಅಲ್–ಸಲಾಮಿ ರೂಪಾಂತರ ಮಾಡಿ, ಚಿತ್ರವಾಗಿಸಿದರು.

ಹಾಗೆ ನೋಡಿದರೆ, ಖದಿಜಾ ಬಾಲ್ಯವೂ ನುಜೂದ್ ತರಹವೇ ಇತ್ತು. ಬಾಲ್ಯವಿವಾಹ ಆಗಿ